ಕುಟುಂಬ

ಎಂ. ಎಂ. ಶಿವಪ್ರಕಾಶ್



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ - ೫೭

ಕುಟುಂಬ

ಎಂ. ಎಂ. ಶಿವಪ್ರಕಾಶ್

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೭

KUTUMBA : By M. M. Shivaprakash. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಹಾಳಿ

ಬೆಲೆ : ರೂ. ೮.೦೦

ಮುದ್ರಕರು
ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈ.ಲಿ.
೧೨/೧೩, ಲಾಲ್‌ಬಾಗ್ ಫೋರ್ಟ್ ರಸ್ತೆ,
ಬೆಂಗಳೂರು – ೫೬೦ ೦೦೪.

ಕುಟುಂಬ

ಸಮಾಜ ಆರಂಭವಾಗಿದ್ದು ಅನೇಕ ಕುಟುಂಬಗಳಿಂದ. ಈ ಕುಟುಂಬಗಳು ಆರಂಭಗೊಂಡಿದ್ದು ಒಂದು ದೊಡ್ಡ ಕಥೆ. ಒಂದಾನೊಂದು ಕಾಲದಲ್ಲಿ ಈಗಿನಂತೆ ಊರುಗಳು ಇರಲಿಲ್ಲ. ಎಲ್ಲಿ ನೋಡಿದರೂ ಗುಡ್ಡ ,ಬೆಟ್ಟ, ಗಿಡಮರಗಳು. ಈ ಬೆಟ್ಟಗುಡ್ಡಗಳ ನಡುವೆ ಮಾನವ ಆಹಾರಕ್ಕಾಗಿ ಅಲೆಯುತ್ತಿದ್ದ ಹಣ್ಣು, ಹಂಪಲು, ಗಡ್ಡೆಗೆಣಸುಗಳನ್ನು ತಿನ್ನುತ್ತಿದ್ದ. ಪ್ರಾಣಿಗಳನ್ನು ಕೊಂದು ಹಸಿಮಾಂಸ ತಿನ್ನಲು ಆರಂಭಿಸಿದ. ಗಡ್ಡೆ ಗೆಣಸುಗಳನ್ನು ಅಗೆಯಲು, ಪ್ರಾಣಿಗಳನ್ನು ಕೊಲ್ಲಲು ಕಲ್ಲಿನ ಆಯುಧಗಳನ್ನು ಬಳಸಿದ. ದೇಹದ ರಕ್ಷಣೆಗೆ ಮರದ ಎಲೆ, ತೊಗಟೆಗಳನ್ನು ಬಳಸಿದ. ಮರದ ಪೊಟರು, ಗವಿಗಳಲ್ಲಿ ವಾಸಿಸುತ್ತಿದ್ದ. ಹೀಗೆ ವಾಸಿಸುತ್ತಿದ್ದ ಸ್ಥಳದಲ್ಲಿ ತಿನ್ನಲು ಆಹಾರ ಸಿಗದೆ ಹೋದಾಗ, ಮರದ ಪೊಟರು, ಗವಿಗಳನ್ನು ತೊರೆದು ಆಹಾರಕ್ಕಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೊರಟ.

ಹೀಗಿದ್ದ ಮಾನವ ಅದೆಷ್ಟೋ ವರ್ಷಗಳ ನಂತರ ನೀರು ಸಿಗುವಲ್ಲಿ ವಾಸಿಸಲು ಆರಂಭಿಸಿದ. ನೀರು ಮತ್ತು ಫಲವತ್ತಾದ ಭೂಮಿಯನ್ನು ಹುಡುಕಿದ. ಇವೆರಡೂ ಒಂದೇ ಕಡೆ ಸಿಗುವಲ್ಲಿ ತಳವೂರಿದ. ದನಕರುಗಳನ್ನು ಸಾಕಿದ. ಬೇಸಾಯ ಮಾಡುವುದನ್ನು ಅರಿತ. ಇದರಿಂದ ಅವನಿಗೆ ಒಂಟಿ ಹಾಗೂ ಅಲೆಮಾರಿ ಜೀವನ ಸಾಕೆನಿಸಿತು. ಇತರರೊಂದಿಗೆ ಕೂಡಿ

ಬದಕಲು ಆರಂಭಿಸಿದ. ಗಾಳಿ, ಬಿಸಿಲು, ಮಳೆಯಿಂದ ರಕ್ಷಣೆ ಪಡೆಯಲು ಮನೆಗಳನ್ನು ಮಾಡಿಕೊಂಡ. ಆಗ ಕುಟುಂಬ ಪದ್ಧತಿ ಆರಂಭವಾಯಿತು.



ಗುಹೆಯಲ್ಲಿ ಆದಿಮಾನವ

ಕುಟುಂಬದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ ಸಂಬಂಧಗಳು ಗಟ್ಟಿಯಾದವು. ಕುಟುಂಬದ ಜನರ ಬೇಡಿಕೆಗಳನ್ನು ಒದಗಿಸಲು ಒಂದು ರೀತಿಯಿಂದ ಕುಟುಂಬ ಬೆಳೆದು ಬಂದಿತು.

ಕುಟುಂಬ ಎಂದರೆ

ಕುಟುಂಬ ಎಂದರೆ, ತಂದೆ, ತಾಯಿ ಮತ್ತು ಮಕ್ಕಳು ಒಟ್ಟಿಗೆ ಒಂದೇ ಮನೆಯಲ್ಲಿ ವಾಸಿಸುವುದು. ಒಂದು ಗಾಡಿ ಚಲಿಸಲು ಎರಡು ಗಾಲಿಗಳು ಹೇಗೆ ಅವಶ್ಯವೊ, ಹಾಗೆಯೇ ಒಂದು ಕುಟುಂಬಕ್ಕೆ ಗಂಡು ಹೆಣ್ಣು ಅವಶ್ಯ. ಕುಟುಂಬ ಮತ್ತು ಜೀವನ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಗಂಡು ಹೆಣ್ಣಿನ ವಿವಾಹ ಸಂಬಂಧದಿಂದ ಒಂದು ಕುಟುಂಬ ಆರಂಭವಾಗುತ್ತದೆ. ಬಹುಪತ್ನಿತ್ವ ಮತ್ತು ಬಹುಪತಿತ್ವ ಪದ್ಧತಿಗಳು ಜಾರಿಗೆ ಬಂದವು.

ಈ ಪದ್ಧತಿಗಳು ಒಂದು ಸಮಾಜದ ಆರೋಗ್ಯಕರ ಲಕ್ಷಣವಲ್ಲ. ಇವುಗಳಲ್ಲಿ ಮನುಷ್ಯನಿಗೆ ಕುಟುಂಬದ ಭದ್ರತೆಯಾಗಲಿ, ನೆಮ್ಮದಿಯಾಗಲಿ ಸಿಗುವುದಿಲ್ಲ. ಏಕಪತ್ನಿತ್ವ ಮತ್ತು ಏಕ ಪತಿತ್ವ ಕುಟುಂಬಗಳಲ್ಲಿ ಪ್ರೀತಿ ಮತ್ತು ವಿಶ್ವಾಸ ನೆಲೆಗೊಳ್ಳುವವು. ಪುರುಷ ಮತ್ತು ಮಹಿಳೆ ಇಂಥ ಕುಟುಂಬದಲ್ಲಿ ಪರಸ್ಪರ ನಿಷ್ಠೆಯಿಂದ ಇರುತ್ತಾರೆ. ಇಂಥ ಕುಟುಂಬಗಳು ಬಹು ಜನಪ್ರಿಯವಾಗಿವೆ. ಜಗತ್ತಿನಲ್ಲಿ ನಮ್ಮ ದೇಶ ಮಾದರಿ ಕುಟುಂಬದ ವ್ಯವಸ್ಥೆಗೆ ಜನಪ್ರಿಯವಾಗಿದೆ.

ಕುಟುಂಬ ಜೀವನದಲ್ಲಿ ಕಾಲಕ್ಕೆ ತಕ್ಕಂತೆ ಬದಲಾವಣೆಗಳು ಕಂಡು ಬರುತ್ತವೆ. ಕುಟುಂಬ ಸ್ಥಾಪನೆಗೆ ವಿವಾಹ ಅಥವಾ ಮದುವೆ ಬಹುಮುಖ್ಯ ಆಕರ್ಷಣೆ. ಕುಟುಂಬ ಜೀವನ ಸುಗಮವಾಗಿ ನಡೆದರೆ, ಸಮಾಜವೂ ಸುಗಮವಾಗಿ ನಡೆಯುತ್ತದೆ. ಕುಟುಂಬ ಬೆಳೆದರೆ ಸಮಾಜವೂ ಬೆಳೆಯುತ್ತದೆ. ಮಾನವ ಸಮಾಜಕ್ಕೆ ಕುಟುಂಬವೇ ಮೂಲಾಧಾರ. ಕುಟುಂಬ ಒಂದು ಸಾಮಾಜಿಕ ಸಂಸ್ಥೆ. ಸಮಾಜ ನಿಂತಿರುವುದೇ ಕುಟುಂಬದ ಮೇಲೆ. ಕುಟುಂಬದ ಸದಸ್ಯರು ಒಂದೇ ಕಡೆ ವಾಸಿಸುತ್ತಾ ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಾರೆ.



ಮದುವೆ ಕುಟುಂಬ ವ್ಯವಸ್ಥೆಯ ಆರಂಭ

ಕುಟುಂಬದ ಲಕ್ಷಣಗಳು

ಕುಟುಂಬ ವ್ಯವಸ್ಥೆಯಲ್ಲಿ ಕಾಲಕ್ಕೆ ತಕ್ಕಂತೆ ಬದಲಾವಣೆಗಳು ಕಂಡು ಬಂದರೂ, ಎಲ್ಲ ಕುಟುಂಬಗಳಿಗೂ ಅನ್ವಯವಾಗುವ ಕೆಲವು ಲಕ್ಷಣಗಳನ್ನು ನಾವು ಕಾಣಬಹುದು.

೧. ಕುಟುಂಬದ ಸ್ಥಾಪನೆಗೆ ಮದುವೆಯೇ ಆಧಾರ.

೨. ಕುಟುಂಬ ಕೆಲವು ಆದರ್ಶಗಳ ಮೇಲೆ ನಿಂತಿದೆ.

೩. ಪ್ರತಿ ಕುಟುಂಬದ ಆದಾಯವು ಕುಟುಂಬದ ಎಲ್ಲ ಸದಸ್ಯರ ಹಿತಕ್ಕಾಗಿ ಇರುತ್ತದೆ.

೪. ಕುಟುಂಬವು ಕೇವಲ ರಕ್ತ ಸಂಬಂಧಿಗಳನ್ನು ಮಾತ್ರ ಒಳಗೊಂಡಿರುತ್ತದೆ.

೫. ಯಜಮಾನನೇ ಕುಟುಂಬದ ಮುಖ್ಯಸ್ಥ.

ಸಾಮಾನ್ಯವಾಗಿ ಮೇಲಿನ ಅಂಶಗಳು, ಪ್ರತಿಯೊಂದು ಜನಾಂಗದ ಕುಟುಂಬದಲ್ಲಿಯೂ ಕಂಡು ಬರುತ್ತದೆ. ನಾವು ಒಂದು ಕುಟುಂಬವೆಂದು ಗುರುತಿಸಬೇಕಾದರೆ ಈ ಲಕ್ಷಣಗಳು ಕಂಡು ಬರುತ್ತಿರಬೇಕು.

ಕುಟುಂಬದ ಸ್ಥಾಪನೆಗೆ ಮದುವೆಯೇ ತಳಪಾಯ. ಗಂಡ ಮತ್ತು ಹೆಂಡತಿಯರ ದೈಹಿಕ ಸಂಬಂಧದಿಂದ ಮಕ್ಕಳು ಹುಟ್ಟುತ್ತಾರೆ. ಈ ಮಕ್ಕಳು ತಂದೆ ತಾಯಿಯರ ಆರೈಕೆಯಲ್ಲಿ ಬೆಳೆಯುತ್ತಾರೆ. ಇವರು ಬಳೆದಂತೆ ಕುಟುಂಬವೂ ಬೆಳೆಯುತ್ತದೆ.

ಕುಟುಂಬದಲ್ಲಿ ದಾಂಪತ್ಯ, ಪ್ರೇಮ, ಮಕ್ಕಳನ್ನು ಪಡೆಯುವುದು, ಮಕ್ಕಳ ಪೋಷಣೆ, ವಾತ್ಸಲ್ಯ, ಬೆಳವಣಿಗೆ ಇವೆಲ್ಲ ನಡೆಯುತ್ತದೆ. ಕುಟುಂಬದ ಅಸ್ತಿತ್ವ ನಿರಂತರವಾಗಿ ಇರಬೇಕಾದರೆ, ಕುಟುಂಬದ ಅಥವಾ ವಂಶದ ಮೇಲಿನ ಅಭಿಮಾನ ಇರಲೇಬೇಕು. ಕುಟುಂಬದಲ್ಲಿನ ಒಳ್ಳೆಯ ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಹೋಗಬೇಕು. ಅಜ್ಞಾನ, ಮೂಢನಂಬಿಕೆಯಿಂದ ಕುಟುಂಬದಲ್ಲಿ ಒಳ್ಳೆಯ ವಾತಾವರಣ ಸೃಷ್ಟಿಸಲಾರೆವು.



ದಾಂಪತ್ಯ ಪ್ರೇಮ

ಕುಟುಂಬದ ಮುಖ್ಯಸ್ಥ ಅಥವಾ ಕುಟುಂಬದ ಇತರ ಸದಸ್ಯರುಗಳ ದುಡಿಮೆಯಿಂದ ಬರುವ ಆದಾಯವು, ಇಡೀ ಕುಟುಂಬದ ಜನರ ಹಿತಕ್ಕಾಗಿಯೇ ಇರುತ್ತದೆ. ಆದಾಯವನ್ನು ಮಕ್ಕಳ ಆರೋಗ್ಯ, ಊಟ, ಬಟ್ಟೆ, ಶಿಕ್ಷಣ ಮೊದಲಾದ ಕಾರ್ಯಗಳಿಗೆ ಉಪಯೋಗಿಸುವುದು. ಕುಟುಂಬದ ಸದಸ್ಯರು ಒಂದೇ ಮನೆಯಲ್ಲಿ ವಾಸಿಸುತ್ತಿರುವುದರಿಂದ ಇವರೆಲ್ಲರ ಜವಾಬ್ದಾರಿ ಮುಖ್ಯಸ್ಥನ ಮೇಲೆ ಇರುತ್ತದೆ. ಹಿಂದೆ ಅವಿಭಕ್ತ ಕುಟುಂಬ ಪದ್ಧತಿಯಲ್ಲಿ ಒಂದೇ ಮನೆಯಲ್ಲಿ ನೂರಾರು ಜನರು ವಾಸಿಸುತ್ತಿದ್ದರು. ಇವರೆಲ್ಲರ ಹೊಣೆಯನ್ನು ಅವಿಭಕ್ತ ಕುಟುಂಬದ ಮುಖ್ಯಸ್ಥನೇ ಹೊರುತ್ತಿದ್ದನು.

ಕುಟುಂಬದ ರೂಪಗಳು

ಕುಟುಂಬದಲ್ಲಿ ಸಾಮಾನ್ಯವಾಗಿ ವಿಭಕ್ತ ಕುಟುಂಬ, ಅವಿಭಕ್ತ ಕುಟುಂಬ, ಮಾತೃಪ್ರಧಾನ, ಪಿತೃಪ್ರಧಾನ ಕುಟುಂಬ ಎಂಬ ವಿಧಗಳಿವೆ.

ವಿಭಕ್ತ ಕುಟುಂಬ

ವಿಭಕ್ತ ಕುಟುಂಬ ಪದ್ಧತಿಯಲ್ಲಿ ತಂದೆ ತಾಯಿ ಮತ್ತು ಅವರ ಮಕ್ಕಳು ಮಾತ್ರ ವಾಸಿಸುತ್ತಾರೆ. ಹೆಣ್ಣು ಮಕ್ಕಳು ವಯಸ್ಸಿಗೆ ಬಂದಾಗ, ಮದುವೆ ಮಾಡಿ ಗಂಡನ ಮನೆಗೆ ಕಳಿಸುತ್ತಾರೆ. ಗಂಡು ಮಕ್ಕಳು ಮದುವೆಯಾದ ನಂತರ ಅವರು ತಮ್ಮ ಹೆಂಡಿರೊಂದಿಗೆ ಬೇರೆ ಮನೆ ಮಾಡಬಹುದು. ಹೀಗೆ ವಿಭಕ್ತ ಕುಟುಂಬದಲ್ಲಿ ಜನರ ಸಂಖ್ಯೆ ಕಡಿಮೆಯಿರುತ್ತದೆ.


ಇಂದು ವಿಭಕ್ತ ಕುಟುಂಬಗಳೇ ಹೆಚ್ಚಾಗಿ ಕಂಡು ಬರುತ್ತವೆ. ಮೊದಲು ಅವಿಭಕ್ತ ಕುಟುಂಬಗಳು ಅಸ್ತಿತ್ವದಲ್ಲಿ ಇದ್ದವು. ಆದರೆ ಇಂದು ಹಳ್ಳಿಗಳಲ್ಲಿಯೂ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚುತ್ತಲಿದೆ. ವಿಭಕ್ತ ಕುಟುಂಬದಲ್ಲಿ ಸಾಮಾನ್ಯವಾಗಿ ಜನರ ಸಂಖ್ಯೆ ಕಡಿಮೆಯಿರುವುದರಿಂದ ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಬಹುದು. ಒಳ್ಳೆಯ ಆಹಾರ, ಆರೋಗ್ಯ ರಕ್ಷಣೆಯನ್ನು ಮಕ್ಕಳಿಗೆ ನೀಡಬಹುದು.



ವಿಭಕ್ತ ಕುಟುಂಬ ಗಂಡ ಹೆಂಡತಿ ಹಾಗೂ ಮಗು

ಅವಿಭಕ್ತ ಕುಟುಂಬ

ಈ ಹಿಂದೆ ಓದಿದಂತೆ, ವಿಭಕ್ತ ಕುಟುಂಬದ ಸದಸ್ಯರ ಸಂಖ್ಯೆ ಕಡಿಮೆ. ಆದರೆ ಅವಿಭಕ್ತ ಕುಟುಂಬದಲ್ಲಿ ಕುಟುಂಬದ ಗಾತ್ರ ದೊಡ್ಡದು. ಇದರಲ್ಲಿ ಅನೇಕ ಸಂಸಾರಗಳು ಒಂದೇ ಮನೆಯಲ್ಲಿ, ಒಟ್ಟಿಗೆ ವಾಸಿಸುತ್ತಾರೆ. ಇಂಥ ಕುಟುಂಬದಲ್ಲಿ ಜನರ ಸಂಖ್ಯೆ ನೂರನ್ನು ದಾಟಿದರೂ ಆಶ್ಚರ್ಯಪಡಬೇಕಿಲ್ಲ. ಇವರೆಲ್ಲರ ಊಟ, ತಿಂಡಿ, ಬಟ್ಟೆಗಳು ಒಂದೇ ಆಗಿರುತ್ತವೆ.



ಹಿರಿಯನಾದವನೆ ಯಜಮಾನನಾಗಿರುತ್ತಾನೆ. ಇಡೀ ಕುಟುಂಬದ ಜವಾಬ್ದಾರಿ ಈ

ಯಜಮಾನನ ಮೇಲೆ ಇರುತ್ತದೆ. ವ್ಯವಹಾರಗಳನ್ನು ಈತನೇ ಮಾಡುತ್ತಾನೆ. ಈ ವ್ಯವಹಾರಗಳಿಗೆ ಎಲ್ಲರೂ ಬದ್ಧರಾಗಿರುತ್ತಾರೆ. ಹೆಂಗಸರಲ್ಲಿ ಹಿರಿಯಳಾದವಳು ಯಜಮಾನಿ ಆಗಿರುತ್ತಾಳೆ. ಕುಟುಂಬದ ಹೆಂಗಸರು ತಮ್ಮ ಸಮಸ್ಯೆಗಳನ್ನು ಯಜಮಾನಿಯ ಹತ್ತಿರ ಹೇಳಿಕೊಳ್ಳುತ್ತಾರೆ.

ಹಳ್ಳಿಗಳಲ್ಲಿ ಹಿಂದೆ ಅವಿಭಕ್ತ ಕುಟುಂಬಗಳಿದ್ದವು. ಇಂದಿನ ಕುಟುಂಬ ಪದ್ಧತಿಯಲ್ಲಿ ಚಿಕ್ಕ ಚಿಕ್ಕ ಕುಟುಂಬಗಳಿವೆ. ಹಳ್ಳಿಗಳಲ್ಲಿಯು ಅವಿಭಕ್ತ ಕುಟುಂಬಗಳು ಕಡಿಮೆಯಾಗಿವೆ.

ಅವಿಭಕ್ತ ಕುಟುಂಬದ ಅನುಕೂಲಗಳು

ಅವಿಭಕ್ತ ಕುಟುಂಬದ ಪದ್ಧತಿಯಿಂದ ಹಿಂದೆ ಅನೇಕ ಅನುಕೂಲತೆಗಳಿದ್ದವು. ಹೊರಗಿನ ಜನರ ಧಾಳಿಯಿಂದ ರಕ್ಷಿಸಿಕೊಳ್ಳಲು ಕುಟುಂಬದ ಸದಸ್ಯರು ಒಂದೇ ಕಡೆ ವಾಸಿಸುತ್ತಿದ್ದರು. ಕುಟುಂಬದ ಆಸ್ತಿಯು ಹಾಳಾಗದಂತೆ ಎಲ್ಲ ಸದಸ್ಯರೂ ನೋಡಿಕೊಳ್ಳುತ್ತಿದ್ದರು. ಮುಂದಿನ ಮಕ್ಕಳು, ಮೊಮ್ಮಕ್ಕಳಿಗೆ ಆಸ್ತಿಯನ್ನು ಬಿಟ್ಟುಹೋಗುತ್ತಿದ್ದರು.

ಯುವಕರು ಕೆಟ್ಟ ಚಟಗಳಿಗೆ ಬಲಿಯಾಗದಂತೆ ಯಜಮಾನ ನೋಡಿಕೊಳ್ಳುತ್ತಿದ್ದ. ನ್ಯಾಯ, ನೀತಿ, ಆಚಾರ-ವಿಚಾರಗಳು ಅವಿಭಕ್ತ ಕುಟುಂಬದಲ್ಲಿ ಜಾರಿಯಲ್ಲಿದ್ದವು. ಭೇದ, ಭಾವ ಇಲ್ಲದೆ ಎಲ್ಲರೂ ತಮ್ಮ ಪಾಲಿನ ಕೆಲಸಗಳನ್ನು ಶ್ರದ್ಧೆಯಿಂದ ಮಾಡುತ್ತಿದ್ದರು. ಹಿಂದಿನಿಂದಲೂ ನಡೆದುಕೊಂಡು ಬಂದಿದ್ದ ನಂಬಿಕೆ, ಆಚಾರಗಳು, ಒಳ್ಳೆಯ ಸಂಪ್ರದಾಯಗಳು ಮುಂದುವರಿದಿದ್ದವು. ದುಡಿಯಲು ಅಸಹಾಯಕರಾದ ಜನರಿಗೆ ನೆರವು ಸಿಗುತ್ತಿತ್ತು. ಗಂಡನನ್ನು ಕಳೆದುಕೊಂಡ ವಿಧವೆಯರು ಕುಟುಂಬದ ಸಹಕಾರದಿಂದ ಜೀವಿಸುತ್ತಿದ್ದರು. ಆದರೆ ಸೋಮಾರಿಗಳಿಗೆ ಅವಕಾಶ ಇರುತ್ತಿರಲಿಲ್ಲ.

ಅನಾನುಕೂಲಗಳು

ಹಿಂದೆ ಅವಿಭಕ್ತ ಕುಟುಂಬ ಪದ್ಧತಿ ಜಾರಿಗೆ ಬಂದಾಗ ಉದ್ದೇಶ ಒಳ್ಳೆಯದಿತ್ತು. ಕಾರಣ ಹೊರಗಿನ ಜನರ ಧಾಳಿಯನ್ನು ಎದುರಿಸಲು ಜನರು ಒಟ್ಟಿಗೆ ಕುಟುಂಬದಲ್ಲೇ ವಾಸಿಸುತ್ತಿದ್ದರು. ಆದರೆ ಇಂದಿನ ವ್ಯವಸ್ಥೆಗೆ ಇದು ಸರಿಹೊಂದುವುದಿಲ್ಲ. ಹಿಂದೆ ದೈಹಿಕ ಶ್ರಮವೇ ಮುಖ್ಯವಾಗಿದ್ದರಿಂದ, ಜನರ ದೈಹಿಕ ಶ್ರಮದ ಅನಿವಾರ್ಯತೆಗೆ ಅವಿಭಕ್ತ ಕುಟುಂಬ ಬಳಕೆಯಲ್ಲಿತ್ತು. ಇಂದು ಮಾನವನ ದೈಹಿಕ ಶ್ರಮ ಕಡಮೆಯಾಯಿತು.

ಕುಟುಂಬದ ಯಜಮಾನನಿಗೆ ಇದ್ದ ಸ್ವತಂತ್ರ ಇತರರಿಗೆ ಇರಲಿಲ್ಲ. ಕುಟುಂಬದ ಸದಸ್ಯರುಗಳ ವೈಯುಕ್ತಿಕ ಬೇಡಿಕೆಗಳಿಗೆ ಅವಕಾಶವಿರುವುದಿಲ್ಲ. ಯಜಮಾನನ ನಿರ್ಧಾರ ಅಂತಿಮವಾದುದು. ವೈಯಕ್ತಿಕ ಅಭಿರುಚಿಯ ಕಾರ್ಯಗಳಿಗೆ ಅವಕಾಶವಿರುವುದಿಲ್ಲ. ಯಜಮಾನನ ಅನುಮತಿಯಿಲ್ಲದೆ ಯಾವ ಕೆಲಸಗಳನ್ನೂ ಮಾಡುವಂತಿಲ್ಲ. ಕುಟುಂಬದ ಕಟ್ಟುಪಾಡುಗಳು ಬಹಳ ಕಠಿಣವಾಗಿದ್ದವು. ಕುಟುಂಬದಲ್ಲಿ ಬೇರೂರಿದ್ದ ಅಜ್ಞಾನ, ಮೂಢನಂಬಿಕೆಗಳನ್ನು ಪಾಲಿಸಬೇಕಿತ್ತು.

ಅವಿಭಕ್ತ ಕುಟುಂಬ ಪದ್ಧತಿಯಲ್ಲಿ, ಯುವಕರಿಗೆ ಸ್ವತಂತ್ರವಾಗಿ ಯೋಚಿಸುವ ಅವಕಾಶವಿರಲಿಲ್ಲ. ಸ್ವತಂತ್ರ ಜೀವನ ಇರಲಿಲ್ಲ. ಕುಟುಂಬದ ಪದ್ಧತಿಗಳಿಗೆ ಹೊಂದಿಕೊಂಡೇ ನಡೆಯಬೇಕಿತ್ತು. ನಾಗರಿಕತೆ ಬೆಳೆದಂತೆ ಅವಿಭಕ್ತ ಕುಟುಂಬ ಪದ್ಧತಿಯಿಂದ ಅನುಕೂಲತೆಗಳಿಗಿಂತ ಅನಾನುಕೂಲಗಳೇ ಹೆಚ್ಚಾದವು.

ಪಿತೃ ಪ್ರಧಾನ ಕುಟುಂಬದಲ್ಲಿ ತಂದೆಯೇ ಮುಖ್ಯಸ್ಥ. ತಂದೆಯೇ ಸರ್ವಾಧಿಕಾರಿ. ಪಿತೃಪ್ರಧಾನ ಕುಟುಂಬದಲ್ಲಿ ರಕ್ತ ಸಂಬಂಧಿಗಳೇ ವಾಸಿಸುತ್ತಾರೆ. ಕುಟುಂಬದ ಆಸ್ತಿಯು ತಂದೆಯಿಂದ ಮಗನಿಗೆ ಬರುತ್ತದೆ. ತಂದೆಯಿಂದ ಬಂದ ಆಸ್ತಿಯನ್ನು ಮಗ ಉಳಿಸಿಕೊಂಡು ತನ್ನ ಮಗನಿಗೆ ಕೊಡಬಹುದು. ಹೀಗೆ ಮಗನ ಮಗನಿಗೆ ಅಂದರೆ ಗಂಡು ಸಂತತಿಗೇ ಸೇರುತ್ತದೆ. ಹೆಣ್ಣು ಮಕ್ಕಳನ್ನು ವಯಸ್ಸಿಗೆ ಬಂದಾಗ, ಅವರಿಗೆ ಮದುವೆ ಮಾಡಿ ಗಂಡನಮನೆಗೆ ಕಳಿಸುತ್ತಾರೆ. ಅವಳು ಗಂಡನ ಮನೆಯಲ್ಲಿ ಹಕ್ಕುದಾರಳಾಗಿರುತ್ತಾಳೆ.

ಇತ್ತೀಚಿಗೆ ತಂದೆಯ ಆಸ್ತಿಯಲ್ಲಿ ಮಹಿಳೆಯರಿಗೆ ಸಮಾನಪಾಲು ಎನ್ನುವ ಕಾಯ್ದೆ ಜಾರಿಗೆ ಬಂದಿದೆ. ತಂದೆಯು ಮಗನಿಗೆ ಆಸ್ತಿಕೊಡುವಂತೆ, ಮಗಳಿಗೂ ಆಸ್ತಿ ಕೊಡುವ ಕಾನೂನು ಜಾರಿಗೆ ಬಂದು ಕುಟುಂಬದಲ್ಲಿ ಎಲ್ಲರೂ ಸಮಾನರು ಎನ್ನುವುದು ಸಾಬೀತಾಗಿದೆ.

ಕುಟುಂಬದ ಕಾರ್ಯಗಳು

ಕುಟುಂಬದ ವ್ಯಾಪ್ತಿ ಬಹಳ ದೊಡ್ಡದು. ಕುಟುಂಬ ವ್ಯಕ್ತಿಯ ಮತ್ತು ಸಮಾಜದ ಜೀವನವನ್ನು ಅವಲಂಬಿಸಿದೆ. ಕುಟುಂಬದ ಕಾರ್ಯಗಳು ಸಮಾಜದ ಮೇಲೆ ಪ್ರಭಾವ ಬೀರುತ್ತವೆ. ಕುಟುಂಬದ ಕಾರ್ಯಗಳಲ್ಲಿ ಮುಖ್ಯವಾದವುಗಳೆಂದರೆ

ಮಕ್ಕಳನ್ನು ಪಡೆಯುವುದು

ಕುಟುಂಬದ ಸದಸ್ಯರುಗಳ ರಕ್ಷಣೆ ಮತ್ತು ಪೋಷಣೆ

ಆರ್ಥಿಕ ಕಾರಣಗಳು

ಸಾಮಾಜಿಕ ಕಾರ್ಯಗಳು

ಮಾನವನಿಗೆ ಲೈಂಗಿಕ ಬಯಕೆ ಸ್ವಾಭಾವಿಕ. ಲೈಂಗಿಕ ಬಯಕೆಗಳನ್ನು ಕುಟುಂಬವು ವ್ಯವಸ್ಥಿತವಾಗಿ ಈಡೇರಿಸುತ್ತದೆ. ಒಂದು ಕುಟುಂಬದ ವಂಶವು ಬೆಳೆಯಬೇಕಾದರೆ ಸಂತಾನೋತ್ಪತ್ತಿ ಅವಶ್ಯ. ಈ ಸಂತಾನೋತ್ಪತ್ತಿ ಕುಟುಂಬದ ಮೂಲಕ ಆಗುತ್ತದೆ. ಸಂತಾನೋತ್ಪತ್ತಿ ಅಥವಾ ಮಕ್ಕಳನ್ನು ಪಡೆಯುವುದು, ಕುಟುಂಬದ ಕಾರ್ಯಗಳಲ್ಲಿ ಒಂದು. ಕೆಲವರು ಸಂತಾನೋತ್ಪತ್ತಿ ಕುಟುಂಬದ ಕಾರ್ಯಗಳಲ್ಲಿ ಪ್ರಮುಖವಾದ ಕಾರ್ಯವೆನ್ನುತ್ತಾರೆ.

ಮಕ್ಕಳನ್ನು ಪಡೆದ ಮೇಲೆ, ಮಕ್ಕಳ ರಕ್ಷಣೆ ಮತ್ತು ಪೋಷಣೆ ಮಾಡುವುದು ಕುಟುಂಬದ ಎರಡನೆಯ ಮುಖ್ಯ ಕಾರ್ಯ. ಮಗು ಬೆಳೆಯಲು ಒಳ್ಳೆಯ ವಾತಾವರಣವನ್ನು ಕುಟುಂಬವು ಸೃಷ್ಟಿಸಬೇಕು. ಕಾರಣ ಮಗುವಿನ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಕುಟುಂಬದಲ್ಲೇ ಆಗುವುದು. ಮಗುವಿನ ಬೆಳವಣಿಗೆ ಆಗುವುದರ ಜತೆಗೆ ಸಾಮಾಜಿಕ

ಬೆಳವಣಿಗೆಯು ಆಗುವುದು ಕುಟುಂಬದಲ್ಲೇ. ಮಗುವಿನ ತಂದೆ ತಾಯಿಯರ ರೀತಿ-ನೀತಿಗಳು ಒಳ್ಳೆಯದಾಗಿರಬೇಕು. ಗಂಡ - ಹೆಂಡತಿಯರಲ್ಲಿ ಸುಮಧುರ ಸಂಬಂಧಗಳಿರಬೇಕು. ಕುಟುಂಬದ ಸೊದರ- ಸೋದರಿಯರಿಗಿಂತ ತಾಯಿಯೇ ಮಗುವಿನ ಮೇಲೆ ಪ್ರಭಾವ ಬೀರುವ ವ್ಯಕ್ತಿ.

ಒಂದು ಗಾದೆ ಮಾತಿನಂತೆ "ಮನೆಯೆ ಮೊದಲ ಪಾಠಶಾಲೆ, ತಾಯಿ ತಾನೆ ಮೊದಲ ಗುರುವು". ಇದು ತುಂಬಾ ಅರ್ಥಪೂರ್ಣವಾಗಿದೆ. ಮಗುವು ಮೊದಲು ಅನುಕರಿಸುವುದು ಕುಟುಂಬದವರನ್ನು. ಆಟ ಪಾಠಗಳನ್ನು, ಭಾಷೆಯನ್ನು ಕಲಿಯುವುದು ಕುಟುಂಬದಲ್ಲಿ. ಹೀಗಾಗಿ ಮಗುವಿಗೆ ಮೊದಲ ಪಾಠಶಾಲೆ ಕುಟುಂಬವೇ ಆಗಿದೆ. ಕುಟುಂಬದ ಭಾಷೆಯೇ ಮಗುವಿನ ಮಾತೃಭಾಷೆಯಾಗುವುದು. ಈ ಭಾಷೆಯನ್ನು ಮಗುವಿಗೆ ಕಲಿಸುವವಳು ತಾಯಿಯೇ.

ಬಾಲ್ಯದಲ್ಲಿ ಮಕ್ಕಳನ್ನು ಬೆಳಸಿದಂತೆ ಅವರು ಬೆಳೆಯುತ್ತಾರೆ. "ಮೂರು ವರ್ಷದ ಬುದ್ಧಿ ನೂರು ವರ್ಷದ ವರೆಗೆ " ಎನ್ನುವ ಗಾದೆಮಾತಿನಂತೆ, ಬಾಲ್ಯದ ಗುಣಗಳೇ ಜೀವನದಲ್ಲಿ ಇರುತ್ತವೆ. ಆದ್ದರಿಂದ ತಂದೆ ತಾಯಿಯರು ಮಕ್ಕಳನ್ನು ಒಳ್ಳೆಯ ರೀತಿಯಲ್ಲಿ ಬೆಳೆಸುವುದು ಮುಖ್ಯಕಾರ್ಯಗಳಲ್ಲಿ ಒಂದು. ಒಳ್ಳೆಯ ಗುಣಗಳ ಜೊತೆಗೆ ಆರೋಗ್ಯವಂತರನ್ನಾಗಿ, ಸದೃಢ ದೇಹ ಹೊಂದಿರುವ ರೀತಿಯಲ್ಲಿ ಬೆಳೆಸಬೇಕು. ಆರೋಗ್ಯವಂತ ಮಕ್ಕಳು ಇರುವುದರಿಂದ ಕುಟುಂಬಕ್ಕೂ ಒಳಿತು. ದೇಶಕ್ಕೂ ಒಳಿತು.

ಕುಟುಂಬದ ಬೆಳವಣಿಗೆಗೆ ಆರ್ಥಿಕ ಕಾರ್ಯಗಳು ಮುಖ್ಯ. ಕುಟುಂಬದ ಸದಸ್ಯರ ಪೋಷಣೆ ಮತ್ತು ರಕ್ಷಣೆಗೆ ಹಣಕಾಸು ಬೇಕೇ ಬೇಕು. ಕುಟುಂಬದ ಅವಶ್ಯಕತೆಗಳನ್ನು ಪೂರೈಸಲು ಕುಟುಂಬಕ್ಕೆ ಉದ್ಯೋಗವಿರಲೇಬೇಕು, ಕುಟುಂಬದ ಮುಖ್ಯಸ್ಥನ, ಅಥವಾ ಸದಸ್ಯರುಗಳ ಉದ್ಯೋಗದಿಂದ ಬರುವ ಆದಾಯದಿಂದ ಕುಟುಂಬ ಬೆಳೆಯುತ್ತದೆ. ಕುಟುಂಬದ ಬೆಳವಣಿಗೆಗೆ ಹಣಕಾಸಿನ ಮಹತ್ವ ಬಹಳ ಮುಖ್ಯ.

ಈ ಮೊದಲು ಹೇಳಿರುವಂತೆ ಕುಟುಂಬ ಸಾಮಾಜಿಕ ಸಂಸ್ಥೆ. ಸಮಾಜ ನಿಂತಿರುವುದೇ ಕುಟುಂಬಗಳ ಮೇಲೆ. ಕುಟುಂಬ ಬೆಳೆದರೆ ಸಮಾಜ ಬೆಳೆಯುತ್ತದೆ. ಸಮುದಾಯದಲ್ಲಿ ಕುಟುಂಬದ ಪಾತ್ರ ಮಹತ್ತರವಾದುದಾಗಿದೆ. ಒಂದು ಕುಟುಂಬದ ಸಹಕಾರ ಇನ್ನೊಂದು ಕುಟುಂಬಕ್ಕೆ ಬೇಕು. ವ್ಯಕ್ತಿಯ ಮತ್ತು ಕುಟುಂಬದ ನಡತೆಗಳಿಂದ ಜನರನ್ನು ಸಮಾಜದಲ್ಲಿ ಗುರುತಿಸುತ್ತಾರೆ. ಒಂದು ಸಮುದಾಯದಲ್ಲಿ ವಿವಿಧ ಜಾತಿಯ ಜನರು, ವಿವಿಧ ವರ್ಗದ ಜನರು ವಾಸಿಸುತ್ತಾರೆ. ಇವರೊಂದಿಗೆ ಹೊಂದಿಕೊಂಡು ಹೋಗುವುದು ವ್ಯಕ್ತಿಯ ಸಾಮಾಜಿಕ ಕಾರ್ಯಗಳಲ್ಲಿ ಒಂದು.

ಹಳ್ಳಿಗಳಲ್ಲಿ ಬೇಸಾಯವೇ ಮುಖ್ಯ ಕಸುಬು. ಬೇಸಾಯಕ್ಕೆ ಬೇಕಾಗುವ ಸಲಕರಣೆಗಳನ್ನು ಬಡಿಗ, ಕಮ್ಮಾರ ಪೂರೈಸುತ್ತಿದ್ದ. ನೇಯುವವ ಬಟ್ಟೆ ಒದಗಿಸುತ್ತಿದ್ದ. ಇವರೊಂದಿಗೆ ವಸ್ತುಗಳನ್ನು ಅದಲು ಬದಲು ಮಾಡಿಕೊಳ್ಳುತ್ತಿದ್ದ.

ಕುಟುಂಬದ ಉದ್ಯೋಗ

ಹಿಂದಿನ ಕಾಲದಲ್ಲಿ ಮಾನವನ ಆಸೆಗಳು ಕಡಿಮೆ ಪ್ರಮಾಣದಲ್ಲಿದ್ದವು. ಪ್ರತಿ ಕುಟುಂಬವು ತನ್ನ ಆವಶ್ಯಕತೆಗಳನ್ನು ತಾನೇ ಪೂರೈಸಿಕೊಳ್ಳುತ್ತಿತ್ತು. ತನಗೆ ಬೇಕಾದ ಅವಶ್ಯಕ ವಸ್ತುಗಳನ್ನು ಉತ್ಪಾದಿಸುವ ಹಾಗೂ ಉಪಯೋಗಿಸುವ ಕೇಂದ್ರವಾಗಿತ್ತು. ಬೇಸಾಯವೇ ಕುಟುಂಬದ ಮುಖ್ಯಕಸುಬಾಗಿತ್ತು. ಕುಟುಂಬದ ತಂದೆ ಮತ್ತು ಮಕ್ಕಳ ಉದ್ಯೋಗದ ನಡುವೆ ವ್ಯತ್ಯಾಸವಿರಲಿಲ್ಲ. ಮಕ್ಕಳು ಕುಟುಂಬದ ಹಿರಿಯರಿಂದ ಉದ್ಯೋಗದ ತರಬೇತಿ ಪಡೆಯುತ್ತಿದ್ದರು. ಇಲ್ಲವೇ ನೋಡಿ ಕಲಿಯುತ್ತಿದ್ದರು. ಕುಟುಂಬದ ಸದಸ್ಯರುಗಳು ತಮ್ಮ ದಿನನಿತ್ಯದ ಬೇಡಿಕೆಗಳನ್ನು ಪೂರೈಸಿಕೊಳ್ಳುತ್ತಿದ್ದರು. ಕುಟುಂಬದ ಉದ್ಯೋಗವು ತಾನೇ ತಾನಾಗಿ ಮುಂದುವರಿಯುತ್ತಿತ್ತು.

ಅನ್ನ, ಆಹಾರ ಪದಾರ್ಥಗಳನ್ನು ಬೆಳೆಯಲು ಜಮೀನು, ಬೇಸಾಯಕ್ಕೆ ಬೇಕಾದ ದನಕರುಗಳು, ಬಟ್ಟೆಗಾಗಿ ಹತ್ತಿ, ಸೆಣಬು, ಬಟ್ಟೆಗಳನ್ನು ನೇಯಲು ನೇಯ್ಗೆಯವರು,

ಬೇಸಾಯದ ಸಲಕರಣೆಗಳನ್ನು ತಯಾರಿಸಲು ಬಡಿಗ, ಕಮ್ಮಾರ, ಮನೆಕಟ್ಟುವವರು ಹುಟ್ಟಿಕೊಂಡರು. ಗುಡಿಕೈಗಾರಿಕೆಗಳು ಆರಂಭಗೊಂಡವು.

ಆಧುನಿಕತೆಯಿಂದ, ಉತ್ಪಾದನಾ ಕೇಂದ್ರಗಳಾಗಿದ್ದ ಕುಟುಂಬಗಳು ಬದಲಾವಣೆಯಾದವು. ವಿಜ್ಞಾನದಿಂದ ಹೊಸ ಹೊಸ ಉದ್ಯೋಗಗಳು ಸೃಷ್ಟಿಯಾದವು. ಹೊಸ ವಿಧಾನಗಳು ಬಳಕೆಗೆ ಬಂದವು. ನಗರಗಳಲ್ಲಿ ಕಾರ್ಖಾನೆಗಳು ತಲೆ ಎತ್ತಿದವು. ಕ್ರಮೇಣ ಹಳ್ಳಿಯ ಜನರು ನಗರಗಳ ಉದ್ಯೋಗವನ್ನು ಹುಡುಕಿ ಹೊರಟರು. ಹೊಲಗದ್ದೆಗಳಲ್ಲಿ ದುಡಿಯುತ್ತಿದ್ದವರು, ಕಾರ್ಖಾನೆಗಳಲ್ಲಿ ಕೆಲಸಕ್ಕೆ ಸೇರಿದರು.

ಮನೆಯೊಳಗಿನ ಉದ್ಯೋಗಗಳಿಗೆ ಸೀಮಿತವಾಗಿದ್ದ ಮಹಿಳೆಯರು, ಮನೆಗಳಿಂದ ಹೊರಬಂದರು. ವ್ಯವಸಾಯದ ಕೆಲಸಗಳಲ್ಲಿ ಪುರುಷರಿಗೆ ಸಹಾಯಕರಾದರು. ಒಂದು ಕುಟುಂಬಕ್ಕೆ ಒಂದೇ ಉದ್ಯೋಗ ಸೀಮಿತವಾಗಿದ್ದದ್ದು, ನಂತರದಲ್ಲಿ ಒಂದೇ ಕುಟುಂಬದ ಜನರು ಹಲವಾರು ಉದ್ಯೋಗಗಳಲ್ಲಿ ತೊಡಗಿದರು.

ಆ ವಿಜ್ಞಾನದ ಬೆಳವಣಿಗೆಯಿಂದ, ಹಳ್ಳಿಯ ಹಾಗೂ ಕುಟುಂಬದ ಉದ್ಯೋಗಗಳು ಹಾಳಾದವು. ತನ್ನ ಪೂರೈಕೆಗಳನ್ನು ತಾನೇ ಪೂರೈಸಿಕೊಳ್ಳುತ್ತಿದ್ದ ಕುಟುಂಬ, ನಂತರ ಬೇರೆಯವರನ್ನು ಅವಲಂಬಿಸಬೇಕಾಯಿತು.

ನಗರಗಳಲ್ಲಿನ ಉದ್ಯೋಗ ಮತ್ತು ಭರದಿಂದ ನಡೆದಿರುವ ವ್ಯಾಪಾರಗಳಿಂದ ಕುಟುಂಬಗಳ ಉದ್ಯೋಗಗಳಲ್ಲಿ ಭಾರಿ ಬದಲಾವಣೆಗಳಾದವು. ಬಹಳಷ್ಟು ಕಡಿಮೆ ಜನರು ಕುಟುಂಬದ ಸಾಂಪ್ರದಾಯಿಕ ಉದ್ಯೋಗಗಳನ್ನು ಮುಂದುವರಿಸಿದರೆ, ಅನೇಕರು ಆಧುನಿಕ ಉದ್ಯೋಗಗಳಿಗೆ ಶರಣಾದರು. ಓದಿ ಕಛೇರಿಗಳಲ್ಲಿ ಉದ್ಯೋಗ ಪಡೆದರು. ಇವರು ಕಛೇರಿಗಳಲ್ಲಿ ಕೆಲಸಗಳನ್ನು ಮಾಡಿದರೆ ಇವರ ಹೆಂಡತಿಯರು ನೇಯ್ಗೆ, ಕಸೂತಿ ಹಾಕುವುದನ್ನು ಕಲಿತರು.

ಗಂಡಸರಂತೆಯೇ ಈಗ ಹೆಂಗಸರು ಸಮಾನರಾಗಿ ದುಡಿಯುತ್ತಿದ್ದಾರೆ. ಸಮಾಜ ಸೇವೆ, ರಾಜಕಾರಣದಲ್ಲಿಯೂ ಹೆಂಗಸರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಎಲ್ಲರ ದುಡಿಮೆಗಳು ಹಣಕ್ಕಾಗಿಯೇ ಇರುವುದರಿಂದ ಕುಟುಂಬದ ಅವಶ್ಯಕತೆಗಳನ್ನು ಹಣಕೊಟ್ಟು ಪೂರೈಸಿಕೊಳ್ಳಬೇಕಾಗಿದೆ. ಹಿಂದೆ ಉತ್ಪಾದನಾ ಕೇಂದ್ರವಾಗಿದ್ದ ಕುಟುಂಬ ಇಂದು ಕುಟುಂಬದ ಸದಸ್ಯರಿಗೆ ಕೇವಲ ಆಶ್ರಯದ ತಾಣವಾಗಿದೆ ಎಂದರೆ ತಪ್ಪಲ್ಲ.

ಕೌಟುಂಬಿಕ ಜೀವನದಲ್ಲಿ ಬದಲಾವಣೆ

ಈ ಹಿಂದೆ ಹೇಳಿರುವಂತೆ ಕಾಡಿನಲ್ಲಿ ಅಲೆಯುತ್ತಿದ್ದ ಮಾನವ ಒಂದು ಕಡೆ ನೆಲೆನಿಂತ. ಕುಟುಂಬ ರಚನೆಗೊಂಡ ಮೇಲೆ ಕುಟುಂಬ ಒಂದು ಉತ್ಪಾದನಾ ಕೇಂದ್ರವಾಯಿತು. ಮಡಿಕೆ - ಕುಡಿಕೆಗಳನ್ನು ತಯಾರಿಸಿದ. ಬಟ್ಟೆ ನೇಯುವುದು ಅರಿತ. ಕುಟುಂಬದ ಸದಸ್ಯರು ಕುಟ್ಟುವುದು, ಬೀಸುವುದು ಮೊದಲಾದ ಕಾರ್ಯಗಳಲ್ಲಿ ತೊಡಗಿರುತ್ತಿದ್ದರು. ಆದರೆ ಯಂತ್ರಗಳ ಬಳಕೆಯಿಂದ ಕೌಟುಂಬಿಕ ಜೀವನದಲ್ಲಿ ಬದಲಾವಣೆಗಳಾದವು.

ಹಿಂದಿನ ಕುಟುಂಬಗಳಲ್ಲಿ ಸದಸ್ಯರ ಸಂಖ್ಯೆ ಹೆಚ್ಚಾಗಿತ್ತು. ಇಂದು ಕೆಲವೇ ಕೆಲವು ಜನರು ವಾಸಿಸುತ್ತಾರೆ. ಇವರೆಲ್ಲರೂ ಸ್ವತಂತ್ರವಾಗಿ ಯೋಚಿಸುತ್ತಾರೆ. ತಮಗೆ ಸರಿಕಂಡದ್ದನ್ನು ತಾವೇ ಮಾಡುತ್ತಾರೆ.

ಜನನ ನಿಯಂತ್ರಣವು ಇಂದಿನ ಕುಟುಂಬಗಳ ಮೇಲೆ ಬಹಳಷ್ಟು ಪ್ರಭಾವ ಬೀರಿದೆ. ಶಿಶುಗಳ ಸಾವಿನ ಪ್ರಮಾಣ ಕಡಿಮೆಯಾಗಿದೆ. ವಿಜ್ಞಾನದ ಬೆಳವಣಿಗೆಯಿಂದ ಸಾಕಷ್ಟು ಔಷಧಿ, ಚುಚ್ಚುಮದ್ದುಗಳನ್ನು ಕಂಡು ಹಿಡಿದರು. ಇದರಿಂದ ಗರ್ಭಿಣಿ ಸ್ತ್ರೀಯರ ಸಾವಿನ ಸಂಖ್ಯೆಯು ಕಡಿಮೆಯಾಯಿತು. ಕುಟುಂಬಗಳಲ್ಲಿ ನಡೆಯುತ್ತಿದ್ದ ಕಾರ್ಯಗಳು ಇಂದು ಕೈಗಾರಿಕೆಗಳಲ್ಲಿ ನಡೆದಿವೆ. ಕಾರ್ಖಾನೆಗಳಲ್ಲಿ ಸಾಕಷ್ಟು ಗುಣಮಟ್ಟದ ವಸ್ತುಗಳು ತಯಾರಾಗುತ್ತಿವೆ. ಗಂಡಸರಂತೆ, ಹೆಂಗಸರು ಶಾಲೆ, ಕಾಲೇಜು, ಕಾರ್ಖಾನೆಗಳಲ್ಲಿ ಶ್ರಮವಹಿಸಿ ದುಡಿಯುತ್ತಿದ್ದಾರೆ. ಇದರಿಂದ ಕುಟುಂಬದ ಆದಾಯವೂ ಹೆಚ್ಚಿದೆ.

ಹಿಂದೆ ವರ್ಷದ ಉದ್ದಕ್ಕೂ ದುಡಿದು ದಣಿದ ಕುಟುಂಬದ ಸದಸ್ಯರುಗಳು ಹಬ್ಬ, ಹರಿದಿನಗಳನ್ನು ಆಚರಿಸುತ್ತಿದ್ದರು. ಮನರಂಜನೆಗಾಗಿ ಹಳ್ಳಿಯ ಜನರು ಹಳ್ಳಿಯ ಆಟಗಳನ್ನು ಪ್ರದರ್ಶಿಸುತ್ತಿದ್ದರು. ಆದರೆ ಇಂದು ಚಲನಚಿತ್ರ ಹಾಗೂ ದೂರದರ್ಶನಗಳ ಹಳ್ಳಿಗರ ಜೀವನದ ಮೇಲೆ ಪ್ರಭಾವ ಬೀರಿವೆ. ಹಳ್ಳಿಯ ಆಟಗಳು ಮಾಯವಾಗುತ್ತಿವೆ.

ಆಧುನಿಕ ಕುಟುಂಬದ ಸಮಸ್ಯೆಗಳು

ಕುಟುಂಬದ ರಚನೆಯ ನಂತರ, ಒಂದೇ ಕುಟುಂಬದಲ್ಲಿ ಅನೇಕರು ವಾಸಿಸುತ್ತಿದ್ದರು. ಅವಿಭಕ್ತ ಕುಟುಂಬಗಳೆ ಹೆಚ್ಚಾಗಿದ್ದವು. ವಿಭಕ್ತ ಕುಟುಂಬಗಳು ಒಡೆದು ಚಿಕ್ಕ ಚಿಕ್ಕ ಕುಟುಂಬಗಳಾದವು. ಈ ಕುಟುಂಬಗಳು ಜನಪ್ರಿಯವಾದರೂ, ಕೆಲ ಸಮಸ್ಯೆಗಳು ಕಾಡುತ್ತಿವೆ.

ತಂದೆ ಮತ್ತು ಮಕ್ಕಳ ನಡುವೆ ಭಿನ್ನಾಭಿಪ್ರಾಯ. ಕುಟುಂಬದ ಹಿರಿಯರ ಹಾಗೂ ಯುವಕರ ವಿಚಾರಗಳು ಭಿನ್ನವಾಗಿವೆ. ಕುಟುಂಬದ ಮತ್ತು ಸಮಾಜದಲ್ಲಿದ್ದ ಸಂಪ್ರದಾಯ, ಪದ್ಧತಿಗಳನ್ನು ಯುವಕರು ಕೈಬಿಟ್ಟರು. ಯುವಕರಿಗೆ ಹಿರಿಯರ ಮಾರ್ಗದರ್ಶನ, ಸಲಹೆಗಳು ಬೇಡವಾದವು. ಅವರಿಗೆ ಸರಿ ಕಂಡಿದ್ದನ್ನು ಮಾಡಲು ಆರಂಭಿಸಿದರು.

ಕುಟುಂಬದಲ್ಲಿ ಹಿರಿಯರಿಗೆ ಅಧಿಕಾರಗಳಿದ್ದವು. ಅವುಗಳನ್ನು ಈಗ ಚಲಾಯಿಸದಂತಾಗಿದೆ. ಸಾಂಪ್ರದಾಯಿಕ ಸಂಸ್ಕೃತಿಯ ಕುಟುಂಬ ಮಾಯವಾಗುತ್ತಿದೆ. ಕುಟುಂಬದ ಸದಸ್ಯರುಗಳಲ್ಲೇ ವೈಮನಸ್ಸು ಉಂಟಾಗಿದೆ. ಅವಿಭಕ್ತ ಕುಟುಂಬದಲ್ಲಿ ಪರಸ್ಪರ ಅವಲಂಬನೆ, ಎಲ್ಲರ ಹಿತಾಸಕ್ತಿಗಳ ಬಗ್ಗೆ ಕಾಳಜಿ ಇತ್ತು. ಆದರೆ ಇಂದಿನ ಕುಟುಂಬದಲ್ಲಿ ಪರಸ್ಪರ ಅವಲಂಬನೆಯ ಬದಲು ವೈಯಕ್ತಿಕತೆಗೆ ಮಹತ್ವವಿದೆ.

ಮಕ್ಕಳು, ವೃದ್ಧರು, ಅಂಗವಿಕಲರಿಗೆ ಹಿಂದಿನ ಕುಟುಂಬದಲ್ಲಿ ಆಶ್ರಯ ಹಾಗೂ ಒಳ್ಳೆಯ ಗೌರವವಿತ್ತು. ಇಂದು ಗೌರವ ಭಾವನೆ ಇಲ್ಲದಂತಾಗಿದೆ.

ಆಧುನಿಕ ಕುಟುಂಬ ಮತ್ತು ಮಹಿಳೆ

ಹಿಂದಿನ ಕಾಲದ ಕುಟುಂಬದಲ್ಲಿ ಮಹಿಳೆಗೆ ಹೆಚ್ಚಿನ ಸ್ವಾತಂತ್ರ ಇರಲಿಲ್ಲ. ಕೇವಲ ಮನೆಯ ಕೆಲಸಗಳಿಗೆ ಮಾತ್ರ ಸೀಮಿತವಾಗಿದ್ದಳು. ಆದರೆ ಇಂದಿನ ಆಧುನಿಕ ಕುಟುಂಬದಲ್ಲಿ ಮಹಿಳೆಯರಿಗೂ ಸಮಾನ ಅವಕಾಶಗಳಿವೆ. ನಗರಗಳ ಬಹುತೇಕ ಕುಟುಂಬಗಳಲ್ಲಿ ಸುಶಿಕ್ಷಿತ ಮಹಿಳೆಯರಿದ್ದಾರೆ. ಉನ್ನತಮಟ್ಟದ ಶಿಕ್ಷಣ ಪಡೆಯುತ್ತಿದ್ದಾರೆ. ಸರಕಾರದ ಕೆಲಸಗಳಲ್ಲಿ ಉದ್ಯೋಗ ಮಾಡುತ್ತಿದ್ದಾರೆ.

ಹಿಂದೆ ಮನೆಗೆಲಸಗಳನ್ನು ಮಹಿಳೆಯೇ ಮಾಡಬೇಕಿತ್ತು. ಇಂದು ಮಹಿಳೆ ಹೊರಗೆ ಕೆಲಸಗಳಿಗೆ ಹೋಗುತ್ತಿರುವುದರಿಂದ ಮನೆಕೆಲಸದವರನ್ನು ನೇಮಿಸುತ್ತಾರೆ. ಮಹಿಳೆಯರೂ ಪುರುಷರಂತೆಯೇ ಶಾಲೆ, ಕಾಲೇಜು, ಬ್ಯಾಂಕು, ಕಾರಖಾನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಗಂಡನ ಮತ್ತು ಮಕ್ಕಳ ಸೇವಕಿಯಂತೆ ಇದ್ದ ಮಹಿಳೆ, ಆಧುನಿಕತೆಯಿಂದಾಗಿ ಇಂದು ಸ್ವತಂತ್ರಳಾಗಿದ್ದಾಳೆ. ಉದ್ಯೋಗದಲ್ಲಿರುವುದರಿಂದ ಆರ್ಥಿಕವಾಗಿಯೂ ಸ್ವತಂತ್ರಳು. ತನ್ನ ಬೇಡಿಕೆಗಳನ್ನು ತಾನೇ ಪೂರೈಸಿಕೊಳ್ಳುತ್ತಿದ್ದಾಳೆ.

ಆಧುನಿಕ ಕುಟುಂಬ ವ್ಯವಸ್ಥೆಯಿಂದ ದುಡಿಯುವ ಮಹಿಳೆಯರ ಸಂಖ್ಯೆ ಹೆಚ್ಚಿದೆ. ಇವರಲ್ಲಿ ವಿವಾಹಿತ ಹಾಗೂ ಅವಿವಾಹಿತ ಮಹಿಳೆಯರೂ ಇದ್ದಾರೆ. ದೊಡ್ಡ ಕುಟುಂಬದ ಜವಾಬ್ದಾರಿ ಹೊತ್ತ ತಂದೆ, ಹೆಣ್ಣು ಮಕ್ಕಳನ್ನು ನೌಕರಿಗೆ ಕಳಿಸಲು ಇಚ್ಛಿಸುತ್ತಾನೆ. ಆಧುನಿಕ ಕುಟುಂಬದ ಜನರ ವಿಶಾಲಮನದಿಂದ ಮಹಿಳೆಯರ ಸ್ಥಿತಿ ಗತಿಗಳು ಹಾಗೂ ಸ್ಥಾನ ಮಾನಗಳು ಹೆಚ್ಚಿವೆ.

ಆಧುನಿಕ ಕುಟುಂಬದ ಗಂಡ ಹೆಂಡತಿ, ಇಬ್ಬರೂ ದುಡಿಯಲು ಹೊರಗೆ ಹೋಗುತ್ತಿರುವುದರಿಂದ, ಮಕ್ಕಳನ್ನು ನೋಡಿಕೊಳ್ಳಲು ಆಳುಗಳನ್ನು ನೇಮಿಸಿಕೊಳ್ಳುತ್ತಾರೆ. ಆಧುನಿಕ ಕುಟುಂಬದಲ್ಲಿ ಮಹಿಳೆ, ಇತರರು ಆಕೆಯನ್ನು ಸಮಾನ ದೃಷ್ಟಿಯಲ್ಲಿ ನೋಡುವಂತೆ ಬಯಸುತ್ತಾಳೆ. ಧೈರ್ಯವಂತಳಾಗಿದ್ದಾಳೆ. ಸಾಮಾಜಿಕ ಸ್ಥಾನಮಾನಗಳ ಅರಿವನ್ನು

ಬೆಳೆಸಿಕೊಂಡಿದ್ದಾಳೆ. ಸಮಾಜದಲ್ಲಿ ವಿಶಿಷ್ಟ ಸ್ಥಾನ ಹಾಗೂ ವ್ಯಕ್ತಿತ್ವವನ್ನು ಪಡೆದಿರುವ, ಆಧುನಿಕ ಕುಟುಂಬದ ಮಹಿಳೆ, ತನ್ನ ಮಕ್ಕಳಿಗೆ ಸಾಮಾಜಿಕತೆಯನ್ನು ಒದಗಿಸುತ್ತಾಳೆ. ಮಕ್ಕಳೊಂದಿಗೆ ಸ್ವಲ್ಪವೇ ಸಮಯವಿದ್ದರು ಅವರ ಬೇಡಿಕೆಗಳನ್ನು ಪೂರೈಸುತ್ತಾಳೆ.

ಕುಟುಂಬ ಮತ್ತು ಮಿತ ಸಂತಾನ

ಹಿಂದೆ ಕುಟುಂಬದ ಗಾತ್ರಕ್ಕೆ ಮಿತಿ ಇರಲಿಲ್ಲ. ಕುಟುಂಬದ ಸದಸ್ಯರುಗಳ ಜೊತೆಗೆ ಸಂಬಂಧಿಕರೂ ಇರುತ್ತಿದ್ದರು. ಇಂದು ಕುಟುಂಬದ ಗಾತ್ರ ಕಡಿಮೆಯಾಗಿದೆ. ಆಧುನಿಕ ಕುಟುಂಬ ಗಂಡ ಹೆಂಡತಿ ಮತ್ತು ಮಕ್ಕಳಿಗೆ ಮಾತ್ರ ಸೀಮಿತವಾಗಿದೆ.

ಕುಟುಂಬದ ಜನರ ಆಸೆಗಳು ಈಡೇರಬೇಕಾದರೆ ಕುಟುಂಬದ ಗಾತ್ರ ಚಿಕ್ಕದಾಗಿರಬೇಕು. ಕುಟುಂಬದ ಸದಸ್ಯರುಗಳಲ್ಲಿ ಸ್ನೇಹ, ಪ್ರೀತಿ, ವಿಶ್ವಾಸ ಮತ್ತು ಅನುಕಂಪಗಳಿರಬೇಕು. ಇದಕ್ಕಾಗಿ ಮಿತಸಂತಾನವಿರಲೇ ಬೇಕು.

ಹಳ್ಳಿಯ ರಾಮಣ್ಣನಿಗೆ ಮನೆತುಂಬಾ ಮಕ್ಕಳು. ಒಂದು ಮಗುವಿಗೂ ಸರಿಯಾದ ಬಟ್ಟೆ ಇಲ್ಲ. ಹೊಟ್ಟೆತುಂಬಾ ಊಟವಿಲ್ಲ. ಮಕ್ಕಳನ್ನೂ ಶಾಲೆಗೆ ಕಳಿಸದೆ, ಮನೆಗೆಲಸಗಳಿಗೆ ಹಚ್ಚಿದ್ದಾನೆ. ಹೊಲಮಾರಿ ದೊಡ್ಡಮಗಳ ಮದುವೆ ಮಾಡಿದ. ಅದೇ ಪಕ್ಕದ ಮನೆ ಮಲ್ಲಯ್ಯನಿಗೆ ಎರಡೇ ಎರಡು ಮಕ್ಕಳು. ಇದರಿಂದ ಮಲ್ಲಯ್ಯನ ಕುಟುಂಬ ನೆಮ್ಮದಿಯಿಂದ ಇದೆ. ಮಕ್ಕಳಿಗೆ ಒಳ್ಳೆಯ ಆಹಾರ, ಬಟ್ಟೆಯನ್ನು ಒದಗಿಸುತ್ತಾನೆ. ತಪ್ಪದೇ ಶಾಲೆಗೆ ಕಳಿಸುತ್ತಾನೆ. ಕಡಿಮೆ ಮಕ್ಕಳನ್ನು ಪಡೆದಿರುವ ಮಲ್ಲಯ್ಯನ ಸಂಸಾರ ಸುಖದಿಂದಿದೆ.

ರಂಗಪ್ಪ ತನ್ನ ಮಗನಿಗೆ ಬೇಗ ಮದುವೆ ಮಾಡುವ ಆಸೆ. ತಾನು ಇನ್ನೂ ಗಟ್ಟಿಯಾಗಿರುವಾಗಲೇ ಸೊಸೆಯನ್ನು ಮನೆಗೆ ಕರೆತರಬೇಕೆಂದು ಕನಸು ಕಂಡವ. ಕೂಡಲೇ ಮಗನಿಗೆ ಹೆಣ್ಣು ಹುಡುಕಿ ಮದುವೆ ಮಾಡಿಯೇ ಬಿಟ್ಟ. ನಿಜ ಹೇಳಬೇಕೆಂದರೆ ರಂಗಪ್ಪನ



ಮಿತ ಸಂತಾನ ಕುರಿತು ವೈದ್ಯರ ಬಳಿ ಚರ್ಚೆ

ಮಗನಿಗೆ ಇನ್ನೂ ಚಿಕ್ಕ ವಯಸ್ಸು. ಮದುವೆಯಾದ ಒಂದು ವರ್ಷಕ್ಕೆ ಮಗುವನ್ನೂ ಪಡೆದ. ಮದುವೆಯಾಗಿ ಐದು ವರ್ಷ ಕಳೆಯುವಷ್ಟರಲ್ಲೇ ಮೂರು ಮಕ್ಕಳನ್ನು ಹೆತ್ತು ಸೊಸೆ ಮುದುಕಿಯಂತೆ ಕಾಣುತ್ತಿದ್ದಳು. ಆದರೆ ಎದುರು ಮನೆಯ ಚಂದ್ರಣ್ಣನ ಮಗನ ಮದುವೆಯಾಗಿ ಹತ್ತು ವರ್ಷಗಳಾದರೂ ಅವರು ಇದೀಗ ಮದುವೆಯಾದವರಂತೆ ಕಾಣುತ್ತಾರೆ. ಕಾರಣ ಅವರು ಮುದ್ದಾದ ಎರಡೇ ಎರಡು ಮಕ್ಕಳನ್ನು ಪಡೆದಿದ್ದಾರೆ.




ವಯಸ್ಸಿಗೆ ಬಾರದ ಮಕ್ಕಳಿಗೆ ಮದುವೆ ಮಾಡುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಚಿಕ್ಕ ವಯಸ್ಸಿನಲ್ಲೇ ಮದುವೆ ಮಾಡುವುದರಿಂದ ಶಕ್ತಿ ಇಲ್ಲದ ಮಕ್ಕಳು ಹುಟ್ಟುತ್ತವೆ. ಹೆಚ್ಚು ಮಕ್ಕಳನ್ನು ಪಡೆಯುವುದರಿಂದ ತಾಯಿಯ ಆರೋಗ್ಯಕ್ಕೂ ಒಳ್ಳೆಯದಲ್ಲ. ಚಿಕ್ಕ ವಯಸ್ಸಿನಲ್ಲೇ ಮದುವೆ ಮಾಡುವುದು ನಮ್ಮ ಹಿತಕ್ಕಾಗಿ ಹಾಗೂ ದೇಶದ ಹಿತಕ್ಕಾಗಿ ಒಳ್ಳೆಯದಲ್ಲ. ಗಂಡಿಗೆ ಇಪ್ಪತ್ತೊಂದು ವರ್ಷ, ಹೆಣ್ಣಿಗೆ ಹದಿನೆಂಟು ವರ್ಷ ತುಂಬಿದ ಮೇಲೆಯೇ ಮದುವೆ ಮಾಡಬೇಕು. ಇದು ಸರಕಾರದ ಕಾನೂನು ಕೂಡ. ಮದುವೆ ಎಂದರೆ ಎರಡು ಜೀವಿಗಳು ಬೆರೆಯುವುದು. ಬೆರೆತು ಬದುಕಿನಲ್ಲಿ ಪ್ರೀತಿ, ಪ್ರೇಮ, ವಿಶ್ವಾಸಗಳಿಂದ ಬದುಕುವುದು.

ಕುಟುಂಬ ಮತ್ತು ಸಾಕ್ಷರತೆ

ಒಂದು ಕುಟುಂಬದಲ್ಲಿ ತಾಯಿ ಓದುಬರಹ ಕಲಿತವಳಾಗಿದ್ದರೆ, ಕುಟುಂಬವೇ ಓದುಬರಹ ಕಲಿತಂತೆ. ಬದುಕಲು ಅನ್ನ, ನೀರು, ಗಾಳಿಯಂತೆ ಅಕ್ಷರ ಜ್ಞಾನದ ಅವಶ್ಯಕತೆಯೂ ಇದೆ. ಅಕ್ಷರ ಕಲಿಯದೆ ಹೋದರೆ ಎಂಥ ಘಟನೆಗಳು ಸಂಭವಿಸುತ್ತವೆ, ಎನ್ನುವುದಕ್ಕೆ ರಾಮಣ್ಣನ ಕಥೆಯೇ ಉದಾಹರಣೆ.

ರಾಮಣ್ಣ ಹಳ್ಳಿಯಲ್ಲಿ ಕೂಲಿ ಮಾಡಿಕೊಂಡು ಬದುಕುತ್ತಿದ್ದ. ಅವನಿಗೆ ಮೂರು ಚಿಕ್ಕ ಮಕ್ಕಳಿದ್ದವು. ಹೆಂಡತಿ ಮನೆಯ ಕೆಲಸಗಳನ್ನು ಮಾಡಿಕೊಂಡು ಮಕ್ಕಳನ್ನು ನೋಡಿಕೊಳ್ಳುತ್ತಿದ್ದಳು. ಹಳ್ಳಿಯಲ್ಲಿ ಅವನಿಗೆ ಕೂಲಿ ಸಿಗದೆ ಹೋದಾಗ, ಅವನು ದೂರದ ನಗರಕ್ಕೆ ಹೊರಟ. ನಗರದಲ್ಲಿ ಅಲೆದು ಒಂದು ಕೆಲಸ ಹುಡುಕಿಕೊಂಡ. ಇವನು ಮನೆಯಿಂದ ಹೊರಡುವಾಗ ಹೆಂಡತಿ ತುಂಬು ಬಸುರಿಯಾಗಿದ್ದಳು. ಒಂದೆರಡು ವಾರ ಕಳೆದ


V.P.SWAMY

ಮೇಲೆ ಹೆಂಡತಿ ಅನಾರೋಗ್ಯ ಪೀಡಿತಳಾದಳು. ಪಕ್ಕದ ಮನೆಯವರು ಆಕೆಯನ್ನು ಆಸ್ಪತ್ರೆಗೆ ಸೇರಿಸಿದರು.

ದೂರದ ನಗರದಲ್ಲಿದ್ದ ರಾಮಣ್ಣನಿಗೆ ಹಣ ತೆಗೆದುಕೊಂಡು ಬೇಗ ಬರುವಂತೆ ಪತ್ರ ಬರೆದರು. ಈ ಪತ್ರವೇನೋ ರಾಮಣ್ಣನಿಗೆ ತಲುಪಿತು. ಆದರೆ ರಾಮಣ್ಣ ಓದು ಬರಹ ಕಲಿಯದ ಅನಕ್ಷರಸ್ಥನಾಗಿದ್ದ. ಕೆಲಸದ ಗಡಿಬಿಡಿಯಲ್ಲಿ ಪತ್ರವನ್ನು ಆಮೇಲೆ ಓದಿಸಿ ಕೇಳೋಣವೆಂದು ಜೇಬಿನಲ್ಲಿ ಇಟ್ಟುಕೊಂಡ. ಕೆಲಸದ ದಣಿವಿನಲ್ಲಿ ಆ ದಿನ ಪತ್ರ ಓದಿಸುವುದು ಅವನಿಗೆ ನೆನಪೇ ಆಗಲಿಲ್ಲ. ಮರುದಿನವೂ ಪತ್ರದ ನೆನಪು ಆಗಲಿಲ್ಲ.

ಒಂದೆರಡು ದಿನಗಳ ನಂತರ ತನಗೆ ಬಂದ ಪತ್ರವನ್ನು ಜ್ಞಾಪಿಸಿಕೊಂಡ ರಾಮಣ್ಣ. ಓದು ಬಲ್ಲವರಿಂದ ಓದಿಸಿದ. ಹೆಂಡತಿಯ ಮೈಯಲ್ಲಿ ಹುಷಾರಿಲ್ಲ. ನೀನು ಬೇಗ ಹಣವನ್ನು ತೆಗೆದುಕೊಂಡು ಬಾ ಎಂದು ಪತ್ರದಲ್ಲಿ ಬರೆದಿತ್ತು. ರಾಮಣ್ಣ ಧನಿಯಿಂದ ಹಣ ತೆಗೆದುಕೊಂಡು ಊರಿಗೆ ಹೋದ. ಆದರೆ ಇವನು ಹೋಗುವಷ್ಟರಲ್ಲಿ ಹೆಂಡತಿ ತೀರಿಕೊಂಡಿದ್ದಳು. ರಾಮಣ್ಣ ಅಕ್ಷರ ಬಲ್ಲವನಾಗಿದ್ದರೆ ಪತ್ರ ಬಂದಾಗಲೇ ಓದಿ ಹಣ ತೆಗೆದುಕೊಂಡು ಹಳ್ಳಿಗೆ ಹೋಗುತ್ತಿದ್ದ. ಆತನ ಹೆಂಡತಿಯು ಬದುಕುತ್ತಿದ್ದಳು.

ಹೆಂಡತಿಯನ್ನು ಕಳೆದುಕೊಂಡು ಕಷ್ಟಕ್ಕೆ ಸಿಲುಕಿದ ರಾಮಣ್ಣ. ಅಕ್ಷರ ಕಲಿತಿದ್ದರೆ ರಾಮಣ್ಣನಿಗೆ ಇಂಥ ಪರಿಸ್ಥಿತಿ ಬರುತ್ತಿರಲಿಲ್ಲ. ಇದು ರಾಮಣ್ಣ ಒಬ್ಬನ ಕಥೆಯಲ್ಲ. ಅಕ್ಷರ ಬಾರದ ಸಾವಿರಾರು ಜನರ ಕಥೆ.

ಕುಟುಂಬ ಶಿಕ್ಷಣ

ನಗರ ಮತ್ತು ಹಳ್ಳಿಗಳಲ್ಲಿರುವ ಕುಟುಂಬಗಳು, ಕುಟುಂಬದ ಸಮತೋಲನಕ್ಕಾಗಿ ಕೆಲವು ನಿಯಮಗಳನ್ನು ಪಾಲಿಸಬೇಕು. ಈ ನಿಯಮಗಳನ್ನು ಕುಟುಂಬದ ಜೀವನ ಶಿಕ್ಷಣವೆನ್ನಬಹುದು.

ಕುಟುಂಬದಲ್ಲಿ ವ್ಯಕ್ತಿ,ವ್ಯಕ್ತಿಗಳ ನಡುವಿನ ಸಂಬಂಧ ಉತ್ತಮವಾಗಿರಬೇಕು. ಗಂಡಹೆಂಡತಿ, ಮಕ್ಕಳ ನಡುವೆ ಪರಸ್ಪರ ಪ್ರೀತಿ, ವಿಶ್ವಾಸ, ಸಹಕಾರಗಳಿರಬೇಕು. ಕುಟುಂಬದಲ್ಲಿರುವ ಮಕ್ಕಳ ಲಾಲನೆ ಮತ್ತು ಪಾಲನೆ, ತಂದೆ ತಾಯಿಯರಿಬ್ಬರಿಗೂ ಸೇರಿದೆ. ಕುಟುಂಬದ ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಬೇಕು. ಮನೆಯಲ್ಲಿ ಶುದ್ಧವಾದ ನೀರು ಮತ್ತು ಗಾಳಿಯ ವ್ಯವಸ್ಥೆ ಇರಬೇಕು.

ಮಕ್ಕಳು ಬಾಲ್ಯದಲ್ಲೇ, ಒಳ್ಳೆಯ ವಾತಾವರಣದಲ್ಲಿ ಬೆಳೆಯಬೇಕು. ಒಳ್ಳೆಯ ಶಿಕ್ಷಣವನ್ನು ನೀಡಬೇಕು. ಇತರರೊಂದಿಗೆ ಹೊಂದಿಕೊಳ್ಳುವ ಹಾಗೆ ಮಕ್ಕಳನ್ನು ಬೆಳೆಸಬೇಕು. ಮೂಢನಂಬಿಕೆಗಳನ್ನು ನಂಬದಂತೆ, ವೈಜ್ಞಾನಿಕವಾಗಿ ಬೆಳೆಸಬೇಕು.

ಮನೆ ಮತ್ತು ಪರಿಸರವನ್ನು ಸ್ವಚ್ಛವಾಗಿಡಬೇಕು. ಮಗುವಿನ ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆ ಆಗುವುದು ಕುಟುಂಬದಲ್ಲೇ. ಆದ್ದರಿಂದ ಕುಟುಂಬದಲ್ಲಿ ಒಳ್ಳೆಯ ವಾತಾವರಣವನ್ನು ಸೃಷ್ಟಿಸುವುದು ಒಳಿತು.

ಮಿತ ಸಂಸಾರ

ಮಾನವನ ಬೇಡಿಕೆಗಳ ಈಡೇರಿಕೆಗಾಗಿ ಹುಟ್ಟಿಕೊಂಡಿತು ಕುಟುಂಬ. ವ್ಯಕ್ತಿ, ಕುಟುಂಬ-ಸಮಾಜ, ಒಂದಕ್ಕೊಂದು ಸಂಬಂಧಿಸಿವೆ. ವ್ಯಕ್ತಿಯು ಕುಟುಂಬದ ಅಂಗವಾಗಿರುವಂತೆ, ಕುಟುಂಬವು ಸಮಾಜದ ಅಂಗವಾಗಿದೆ. ಮೊದಲು ಕುಟುಂಬದ ಗಾತ್ರ

ದೊಡ್ಡದಿತ್ತೆಂಬುದು ನಿಜ. ನಂತರದ ಆಧುನಿಕತೆಯಿಂದ ಕುಟುಂಬದ ಗಾತ್ರ ಚಿಕ್ಕದಾಗುತ್ತ ಬಂದಿದೆ. ಕುಟುಂಬದಲ್ಲಿ ಮಹಿಳೆಗೆ ಸಮಾನ ಅವಕಾಶಗಳು ಸಿಗುತ್ತಿವೆ.

ಜಾತಿ ಆಧಾರಿತ ಕುಟುಂಬದ ಉದ್ಯೋಗಗಳು ಮಾಯವಾಗಿವೆ. ಕುಟುಂಬದ ಸಂಪ್ರದಾಯಗಳ ಆಚರಣೆಯಲ್ಲಿ ಬದಲಾವಣೆಯಾಗಿವೆ. ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಬದಲಾವಣೆಗಳು ನಡೆದಿವೆ. ಚಿಕ್ಕ ಕುಟುಂಬ ಇಂದು ಹೆಚ್ಚು ಅನಿವಾರ್ಯವಾಗಿದೆ. ಆಧುನಿಕತೆಯಿಂದಾಗಿ ಕುಟುಂಬದ ಬೇಡಿಕೆಗಳು ಹೆಚ್ಚುತ್ತಿವೆ.

* * *

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು